# ರಾಮಕೃಷ್ಣ ಸುದ್ದಿ ಸಂಚಯ

ಶ್ರೀ ರಾಮಕೃಷ್ಣ ಕ್ರೆಡಿಟ್ ಕೋ-ಓಪರೇಟಿವ್ ಸೊಸೈಟಿ ಲಿ., ಮಂಗಳೂರು

ಇದರ ಮುಖವಾಣಿ ತ್ರೈಮಾಸಿಕ ಸುದ್ದಿ ಪತ್ರಿಕೆ

ESTD : 1994

ವಿಳಾಸ : 2ನೇ ಮಹಡಿ, ಅಮೃತೋತ್ಸವ ಕಟ್ಟಡ, ಬಂಟ್ಸ್ ಹಾಸ್ಟೆಲ್ ಸರ್ಕಲ್, ಮಂಗಳೂರು-575 003.

Website : www.ramakrishnacredit.com Email : ho@ramakrishnacredit.com Private Circulation only

ಸಂಪುಟ : V ಸಂಚಿಕೆ : 4 ಎಲ್ಲರೂ ಒಬ್ಬನಿಗಾಗಿ, ಒಬ್ಬನು ಎಲ್ಲರಿಗಾಗಿ ಜನವರಿ-ಮಾರ್ಚ್ 2020




ಶ್ರೀ ಕೆ. ಜೈರಾಜ್ ಬಿ. ರೈ
ಅಧ್ಯಕ್ಷರು

## ಅಧ್ಯಕ್ಷರ ಮಾತು

### ಕೃತಜ್ಞತೆಗಳು

### 2019-20ನೇ ಸಾಲಿನಲ್ಲಿ ಒಟ್ಟು ವ್ಯವಹಾರದಲ್ಲಿ ಸಾರ್ವಕಾಲಿಕ ಹೆಚ್ಚಳದೊಂದಿಗೆ "ಅತ್ಯುತ್ತಮ" ಸಾಧನೆ

ದಿನಾಂಕ 31.03.2020ಕ್ಕೆ ಅಂತ್ಯಗೊಂಡ 2019-20 ಸಾಲಿನಲ್ಲಿ ಹಿಂದಿನ ವರ್ಷಗಳಂತೆ ಒಟ್ಟು ವ್ಯವಹಾರದಲ್ಲಿ ಸಾರ್ವಕಾಲಿಕ ಹೆಚ್ಚಳವನ್ನು ದಾಖಲಿಸಿಕೊಂಡು ಎಲ್ಲಾ ಕಾರ್ಯವಿಭಾಗದಲ್ಲಿ ನಿಗದಿತ ಗುರಿಯನ್ನು ಮೀರಿದ ಸಾಧನೆಯನ್ನು ಮಾಡಿ, ಅತ್ಯುತ್ತಮ ಪ್ರಗತಿ ಈ ವರ್ಷವೂ ಕಾಯ್ದುಕೊಂಡಿದೆ ಎಂದು ತಿಳಿಸಲು ಸಂತೋಷಪಡುತ್ತೇನೆ.

**31.03.2020ಕ್ಕೆ ಅಂತ್ಯವಾದ 2019-20 ಸಾಲಿನಲ್ಲಿ ಸಂಘದ ಪ್ರಗತಿ ಸಾಧನೆಯ ಅಂಕಿ ಅಂಶ ಈ ಕೆಳಗಿನಂತಿದೆ. (ಅಂಕಿ ಅಂಶಗಳು ಲೆಕ್ಕಪರಿಶೋಧನೆಗೆ ಒಳಪಟ್ಟು)**

| ಕ್ರ. ಸಂ. | ಕಾರ್ಯ ವಿಭಾಗ | ಹಿಂದಿನ ಸಾಲು 2018-19 | ಪ್ರಸ್ತುತ ಸಾಲು 2019-20 | | 2018-19 ಸಾಲಿನಿಂದ ಹೆಚ್ಚಳ | ಹಿಂದಿನ ಸಾಲಿಗೆ ಹೋಲಿಸಿದಾಗ ಶೇಕಡಾವಾರು ಪ್ರಗತಿ |
|---|---|---|---|---|---|---|
| | | 31.03.2019ಕ್ಕೆ ಇದ್ದಂತೆ | 31.03.2020 ಗುರಿ | 31.03.2020 ನೈಜ | | |
| 1 | ಠೇವಣಾತಿಗಳು | 194 ಕೋಟಿ | 224 ಕೋಟಿ | 236 ಕೋಟಿ | 42 ಕೋಟಿ | 22% |
| 2 | ಸಾಲ ಮತ್ತು ಮುಂಗಡ | 159 ಕೋಟಿ | 184 ಕೋಟಿ | 195 ಕೋಟಿ | 36 ಕೋಟಿ | 23% |
| 3 | ಒಟ್ಟು ವ್ಯವಹಾರ | 353 ಕೋಟಿ | 408 ಕೋಟಿ | 431 ಕೋಟಿ | 78 ಕೋಟಿ | 22% |
| 4 | ನಿವ್ವಳ ಲಾಭ | 5.78 ಕೋಟಿ | 5.90 ಕೋಟಿ | 6.22 ಕೋಟಿ | 44 ಲಕ್ಷ | 8% |
| 5 | **ಅನುತ್ಪಾದಕ ಆಸ್ತಿ** | | | | | |
| | ಮೊಬಲಗು | 15 ಲಕ್ಷ | 15 ಲಕ್ಷ | 16ಲಕ್ಷ | | |
| | ಶೇಕಡ | 0.10% | 0.10% | 0.08% | | |
| | ನಿವ್ವಳ ಅನುತ್ಪಾದಕ ಆಸ್ತಿ | Nil | Nil | Nil | | |

ವರ್ಷಾಂತ್ಯಕ್ಕೆ ಕೊರೋನಾ ವೈರಸ್ ಸೋಂಕಿನ ತಡೆಗೆ ಸರ್ಕಾರವು ಲಾಕ್‌ಡೌನ್ ಘೋಷಿಸಿದ್ದರೂ ಸಂಘವು 31.03.2020ರ ವರ್ಷಾಂತ್ಯಕ್ಕೆ ನಿಗದಿಪಡಿಸಿದ ಎಲ್ಲಾ ಗುರಿಗಳನ್ನು ಸಾಧಿಸಿರುವುದು, ಸಂಘವು ತನ್ನ ಕಾರ್ಯಸಾಧನೆಗೆ ಅನುಸರಿಸಿದ ಕಾರ್ಯತಂತ್ರಗಳ ಸಫಲತೆ, ಸದಸ್ಯ ಬಾಂಧವರಾದ ತಾವು ಸಂಘದ ಮೇಲಿಟ್ಟ ನಂಬಿಕೆ, ಆಡಳಿತ ಮಂಡಳಿ ನಿರ್ದೇಶಕರುಗಳ ಮತ್ತು ಎಲ್ಲಾ ಶಾಖಾ ಸಲಹಾ ಸಮಿತಿ ಸದಸ್ಯರುಗಳ ಸಹಕಾರ, ಶಾಖಾಧಿಕಾರಿಗಳು ಮತ್ತು ಸಿಬ್ಬಂದಿಗಳ ಶ್ರಮವೇ ಕಾರಣ. ತಮಗೆಲ್ಲರಿಗೂ ನನ್ನ ವೈಯಕ್ತಿಕ ನೆಲೆಯಲ್ಲಿ ಹಾಗೂ ಸಂಘದ ವತಿಯಿಂದ ಹೃತ್ಪೂರ್ವಕ ಕೃತಜ್ಞತೆಗಳು ಮತ್ತು ಅಭಿನಂದನೆಗಳನ್ನು ತಿಳಿಸುತ್ತೇನೆ.

**ಕೋವಿಡ್ – 19**

ಈ ಲಾಕ್‌ಡೌನ್ ಅವಧಿಯಲ್ಲಿ ಸಂಘವು ತನ್ನ ಸದಸ್ಯರಿಗೆ ನಿರಂತರವಾಗಿ ಸೇವೆ ಸಲ್ಲಿಸಲು ತನ್ನ ಎಲ್ಲಾ 20 ಶಾಖೆಗಳನ್ನು ತೆರೆದಿರಿಸಿ ಕಾರ್ಯನಿರತವಾಗಿದೆ. ಈ ಕ್ಲಿಷ್ಟ ಪರಿಸ್ಥಿತಿಯಲ್ಲಿಯೂ ಸಂಘದ ವ್ಯವಹಾರವನ್ನು ನಡೆಸಲು ಸಹಕರಿಸಿದ ಸಂಘದ ಸಿಬ್ಬಂದಿಗಳಿಗೆ ನನ್ನ ಶುಭಾಶಯಗಳನ್ನು ತಿಳಿಸುತ್ತೇನೆ.

ನಮ್ಮ ಜಿಲ್ಲೆ, ನಮ್ಮ ರಾಜ್ಯ, ನಮ್ಮ ದೇಶ ಕೊರೋನಾ ವೈರಸ್‌ನ ಸೋಂಕಿನಿಂದ ಶೀಘ್ರದಲ್ಲೇ ಮುಕ್ತಿ ಹೊಂದಿ, ನಮ್ಮ ಜೀವನವು ಸಹಜ ಸ್ಥಿತಿಗೆ ಮರಳಲಿ ಎಂದು ಆಶಿಸುತ್ತಾ, ಈ ಸಂದಿಗ್ಧ ಪರಿಸ್ಥಿತಿಯನ್ನು ನಿರ್ವಹಿಸುತ್ತಿರುವ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ, ಆರೋಗ್ಯ ಪ್ರವರ್ತಕರ, ಜಿಲ್ಲಾಡಳಿತಗಳ ಶ್ರಮವನ್ನು ಕೃತಜ್ಞತಾಪೂರ್ವದಿಂದ ನೆನೆಯುತ್ತೇನೆ.

## 2015ರಿಂದ 2020ರ ಅವಧಿಯ 5 ವರ್ಷಗಳ ಪ್ರಗತಿ ಸಾಧನೆಗಳ ಬಗ್ಗೆ

ಪ್ರಸ್ತುತ ಆಡಳಿತ ಮಂಡಳಿ 01.04.2015ರಿಂದ ಅಧಿಕಾರ ವಹಿಸಿಕೊಂಡು ಈ ಐದು ವರ್ಷಗಳಲ್ಲಿ ಸಂಘವು ಸಾಧಿಸಿರುವ ಪ್ರಗತಿಯ ಪಕ್ಷಿನೋಟ ಹಾಗೂ 2015ರಿಂದ 2020ರ ಅವಧಿಗೆ ಹಮ್ಮಿಕೊಂಡ ಕಾರ್ಯಯೋಜನೆಗಳ ಸಾಧನೆ ಬಗ್ಗೆ ವಿವರಗಳು ಈ ಕೆಳಗಿನಂತಿದೆ.

(ರೂ. ಕೋಟಿಗಳಲ್ಲಿ)

| ವರ್ಷ | ಸದಸ್ಯರ ಸಂಖ್ಯೆ | ಪಾಲು ಬಂಡವಾಳ | ಠೇವಣಿ | ಸಾಲಗಳು | ದುಡಿಯುವ ಬಂಡವಾಳ | ನಿವ್ವಳ ಲಾಭ | ಒಟ್ಟು ವ್ಯವಹಾರ | ಡಿವಿಡೆಂಟ್ | ಅನುತ್ಪಾದಕ ಆಸ್ತಿ Gross |
|---|---|---|---|---|---|---|---|---|---|
| 31.03.2015 | 43976 | 344 | 11832 | 8639 | 13441 | 281 | 20471 | 20% | 0.13% |
| 31.03.2016 | 47672 | 440 | 12709 | 9481 | 14624 | 385 | 22190 | 22% | 0.15% |
| 31.03.2017 | 51377 | 544 | 13355 | 10754 | 15683 | 403 | 24109 | 23% | 0.15% |
| 31.03.2018 | 55756 | 631 | 16000 | 12843 | 18727 | 471 | 28843 | 23% | 0.12% |
| 31.03.2019 | 60603 | 670 | 19351 | 15884 | 22458 | 577 | 35235 | 25% | 0.10% |
| 31.03.2020 | 67030 | 720 | 23610 | 19512 | 27114 | 622 | 43122 | | 0.08% |

**2019–20ನೇ ಸಾಲಿನಾಂತ್ಯ 31.03.2020ರ ಅಂಕಿ ಅಂಶಗಳನ್ನು 2014–15 ನೇ ಸಾಲಿನಾಂತ್ಯ 31.03.2015ಕ್ಕೆ ಹೋಲಿಸಿದಾಗ, ಈ 5 ವರ್ಷದ ಅವಧಿಯಲ್ಲಿ,**

1) ಸದಸ್ಯರು 23054 ಹೆಚ್ಚಾಗಿ, ಸದಸ್ಯತನದಲ್ಲಿ ಶೇ.52ರಷ್ಟು ವೃದ್ಧಿ.
2) ಪಾಲು ಬಂಡವಾಳ ₹ 3.76 ಕೋಟಿಯಷ್ಟು ಹೆಚ್ಚಾಗಿ ಶೇ.109ರಷ್ಟು ವೃದ್ಧಿ.
3) ಠೇವಣಿಯು ₹ 117.78 ಕೋಟಿಯಷ್ಟು ಹೆಚ್ಚಾಗಿ ಶೇ.100ರಷ್ಟು ವೃದ್ಧಿ.
4) ಸಾಲ ಮತ್ತು ಮುಂಗಡ ₹ 108.73 ಕೋಟಿ ಹೆಚ್ಚಾಗಿ, ಶೇ.126ರಷ್ಟು ವೃದ್ಧಿ.
5) ದುಡಿಯುವ ಬಂಡವಾಳವು ₹ 136.73 ಕೋಟಿ ಹೆಚ್ಚಾಗಿ, ಶೇ.102ರಷ್ಟು ವೃದ್ಧಿ.
6) ದಿನಾಂಕ 31.03.2015ರಲ್ಲಿ ಶೇ.0.13ರಷ್ಟಿದ್ದ ಅನುತ್ಪಾದಕ ಆಸ್ತಿಯು ಶೇ.0.05ರಷ್ಟು ಕಡಿಮೆಯಾಗಿ ದಿನಾಂಕ 31.03.2020ಕ್ಕೆ ಶೇ.0.08ಕ್ಕೆ ಸೀಮಿತವಾಗಿರುವುದು ಹಾಗೂ ನಿವ್ವಳ ಅನುತ್ಪಾದಕ ಆಸ್ತಿ ಶೂನ್ಯ ಪ್ರಮಾಣದಲ್ಲಿರುವುದು.
7) 31.03.2015 ರಿಂದ 31.03.2020ರ ಅವಧಿಯಲ್ಲಿ ನಿವ್ವಳ ಲಾಭವು ₹ 3.44 ಕೋಟಿ ಹೆಚ್ಚಾಗಿ, ಶೇ.122ರಷ್ಟು ವೃದ್ಧಿ.
8) 2014–15ನೇ ಸಾಲಿನಲ್ಲಿ ಶೇ.20, 2015–16ಕ್ಕೆ ಶೇ.22, 2016–17ಕ್ಕೆ ಶೇ.23, 2017–18ಕ್ಕೆ ಶೇ.23 ಮತ್ತು 2018–19ಕ್ಕೆ ಶೇ.25 ಡಿವಿಡೆಂಡ್ ವಿತರಿಸಿದೆ.
9) 31.03.2015ರಲ್ಲಿ 16 ಶಾಖೆಗಳಿದ್ದು, 31.03.2020ಕ್ಕೆ 20 ಶಾಖೆಗಳು.
10) 2015ರಿಂದ 2020ರ ವರೆಗಿನ 5 ವರ್ಷಗಳ ಅವಧಿಯಲ್ಲಿ ಸಂಘವು ಸಾಧಿಸಬೇಕಾದ ನಿರ್ದಿಷ್ಟ ಕಾರ್ಯಯೋಜನೆ ಗುರಿಗಳನ್ನು ಇಟ್ಟುಕೊಂಡಿದ್ದು, 31.03.2020ಕ್ಕೆ ಒಟ್ಟು ವ್ಯವಹಾರವನ್ನು ₹ 205 ಕೋಟಿಗಳಿಂದ ₹ 400 ಕೋಟಿ ತಲುಪಿಸುವುದು. ಆದರೆ 31.03.2020ಕ್ಕೆ ಸಂಘವು ₹ 431 ಕೋಟಿ ವ್ಯವಹಾರವನ್ನು ದಾಖಲಿಸಿ ಈ ಐದು ವರ್ಷಗಳಲ್ಲಿ ₹ 226 ಕೋಟಿ ವ್ಯವಹಾರವನ್ನು ಹೆಚ್ಚಿಸಿಕೊಂಡು ಶೇ.109 ವೃದ್ಧಿಗೊಂಡಿದೆ.
11) ಸಂಘದ ಕೇಂದ್ರ ಕಛೇರಿಗಾಗಿ ನಿವೇಶನವನ್ನು ಖರೀದಿಸಲಾಗಿರುವುದು. ಇದರಲ್ಲಿ ಸಂಘದ ಕೇಂದ್ರ ಕಛೇರಿಗಾಗಿ ಸುಸಜ್ಜಿತ ಆಡಳಿತ ಸೌಲಭ್ಯವುಳ್ಳ ಕಟ್ಟಡ ನಿರ್ಮಿಸಲು ಪೂರ್ವಭಾವಿ ಕೆಲಸಗಳನ್ನು ಆರಂಭಿಸಲಾಗುತ್ತಿದೆ.
12) ತಮ್ಮೆಲ್ಲರ ಸಹಕಾರದಿಂದ ಈ ಅವಧಿಯಲ್ಲಿ ಸಂಘವು ನಿರಂತರ ಪ್ರಗತಿಯನ್ನು ಕ್ಯಾದುಕೊಂಡು ಬಂದಿದ್ದು, ರಾಜ್ಯದ ಅತ್ಯುತ್ತಮ ಕ್ರೆಡಿಟ್ ಸಹಕಾರ ಸಂಘಗಳಲ್ಲಿ ಒಂದಾಗಿ ಗುರುತಿಸಿಕೊಂಡು ರಾಜ್ಯ ಸರ್ಕಾರದ, ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿನ ಗೌರವ ಪ್ರಶಸ್ತಿಗಳಿಗೆ ಪಾತ್ರವಾಗಿದೆ.

**2020–2025ರ ಐದು ವರ್ಷದ ಅವಧಿಗೆ ಆಡಳಿತ ಮಂಡಳಿ ಚುನಾವಣೆಯಲ್ಲಿ ಅವಿರೋಧ ಆಯ್ಕೆ:**

ದಿನಾಂಕ 08.02.2020ರಂದು ಸಂಘದ ಮುಂದಿನ ಐದು ವರ್ಷಗಳ ಅವಧಿ (2020ರಿಂದ 2025ರ ಅವಧಿಗೆ) 16 ನಿರ್ದೇಶಕರ ನ್ನೊಳಗೊಂಡ ನೂತನ ಆಡಳಿತ ಮಂಡಳಿಯು ಅವಿರೋಧವಾಗಿ ಚುನಾಯಿಸಿರುವುದಕ್ಕೆ, ಹಾಗೂ ನನ್ನನ್ನು ಸಂಘದ ಅಧ್ಯಕ್ಷನಾಗಿ ಮುಂದಿನ ಐದು ವರ್ಷಗಳ ಅವಧಿಗೆ ಎರಡನೇ ಬಾರಿಗೆ ಅವಿರೋಧವಾಗಿ ಆಯ್ಕೆ ಮಾಡಿದ ಎಲ್ಲಾ ಸದಸ್ಯ ಬಾಂಧವರಿಗೆ ಹಾಗೂ ಆಡಳಿತ ಮಂಡಳಿ ನಿರ್ದೇಶಕರುಗಳಿಗೆ ನನ್ನ ಹೃತ್ಪೂರ್ವಕ ವಂದನೆಗಳನ್ನು ತಿಳಿಸುತ್ತೇನೆ.

# ಮುಂದಿನ ಐದು ವರ್ಷಗಳ ಅವಧಿಗೆ ಅವಿರೋಧವಾಗಿ ಆಯ್ಕೆಯಾದ ಸಂಘದ ನೂತನ ಆಡಳಿತ ಮಂಡಳಿ



**ಶ್ರೀ ಕೆ. ಜೈರಾಜ್ ಬಿ. ರೈ**
ಅಧ್ಯಕ್ಷರು



**ಶ್ರೀಮತಿ ಲಕ್ಷ್ಮಿ ಜಯಪಾಲ ಶೆಟ್ಟಿ**
ಉಪಾಧ್ಯಕ್ಷರು



ಶ್ರೀಮತಿ ಎ. ರತ್ನಕಾಂತಿ ಶೆಟ್ಟಿ
ನಿರ್ದೇಶಕರು



ಶ್ರೀ ಕೆ. ಸೀತಾರಾಮ ರೈ ಸವಣೂರು
ನಿರ್ದೇಶಕರು



ಡಾ| ಕೆ. ಸುಭಾಶ್ಚಂದ್ರ ಶೆಟ್ಟಿ
ನಿರ್ದೇಶಕರು



ಶ್ರೀ ಪಿ. ಶಿವರಾಮ ಅಡ್ಯಂತಾಯ
ನಿರ್ದೇಶಕರು



ಸಿಎ ಎಚ್.ಆರ್. ಶೆಟ್ಟಿ
ನಿರ್ದೇಶಕರು



ಶ್ರೀ ವಿಠಲ ಪಿ. ಶೆಟ್ಟಿ
ನಿರ್ದೇಶಕರು



ಶ್ರೀ ಯಂ. ರಾಮಯ ಶೆಟ್ಟಿ
ನಿರ್ದೇಶಕರು



ಶ್ರೀ ಅರುಣ್ ಕುಮಾರ್ ಶೆಟ್ಟಿ
ನಿರ್ದೇಶಕರು



ಶ್ರೀ ಪಿ.ಬಿ. ದಿವಾಕರ ರೈ
ನಿರ್ದೇಶಕರು



ಶ್ರೀ ರವೀಂದ್ರನಾಥ ಜಿ. ಹೆಗ್ಡೆ
ನಿರ್ದೇಶಕರು



ಶ್ರೀ ಕುಂಬ್ರ ದಯಾಕರ ಆಳ್ವ
ನಿರ್ದೇಶಕರು



ಶ್ರೀ ಬೆಳ್ಳಿಪಾಡಿ ಪ್ರಸಾದ್ ಕೌಶಲ್ ಶೆಟ್ಟಿ
ನಿರ್ದೇಶಕರು



ಡಾ| ಎಂ. ಸುಧಾಕರ ಶೆಟ್ಟಿ
ನಿರ್ದೇಶಕರು



ಶ್ರೀ ಎ. ಚಿಕ್ಕಪ್ಪ ನ್ಯಾಕ್
ನಿರ್ದೇಶಕರು

**ಅವಿರೋಧವಾಗಿ ಆಯ್ಕೆ ಮಾಡಿ ನಮಗೆ ಸಂಘದ ಸೇವೆಯಲ್ಲಿ ಇನ್ನಷ್ಟು ತೊಡಗಿಸಿಕೊಳ್ಳಲು ಅವಕಾಶ ಕಲ್ಪಿಸಿಕೊಟ್ಟಿರುವ ಎಲ್ಲಾ ಸದಸ್ಯ ಬಾಂಧವರಿಗೆ, ಹಿತೈಷಿಗಳಿಗೆ ನಮ್ಮ ಹೃತ್ಪೂರ್ವಕ ಕೃತಜ್ಞತೆಗಳು.**

ಮುಂದಿನ ಐದು ವರ್ಷದ ಅವಧಿಗೆ (2020–2025) ನಾವು ಸಾಧಿಸಬೇಕಾದ ನಿರ್ದಿಷ್ಟ ಗುರಿಗಳನ್ನು ನಿರ್ಧರಿಸಿ ಸಾಕಷ್ಟು ಮುಂಚೆಯೆ ಕಾರ್ಯತಂತ್ರಗಳನ್ನು ರೂಪಿಸಿಕೊಂಡು ಎಲ್ಲಾ ಗುರಿಗಳನ್ನು ಸಾಧಿಸುವಲ್ಲಿ ಯೋಜನಾಬದ್ಧವಾಗಿ ಮುಂದುವರಿಯಲು ಸಹಕಾರಿಯಾಗುವಂತೆ, ಮುನ್ನೋಟ 2025 ಎಂಬ ಕಾರ್ಯಯೋಜನೆಯನ್ನು ದಿನಾಂಕ 28.02.2020ರ ಆಡಳಿತ ಮಂಡಳಿಯಲ್ಲಿ ಮಂಡಿಸಿದ್ದು, ಆಡಳಿತ ಮಂಡಳಿಯು ಅದನ್ನು ಸರ್ವಾನುಮತದಿಂದ ಅಂಗೀಕರಿಸಿ ಅದನ್ನು ಸಾಧಿಸುವ ನಿಟ್ಟಿನಲ್ಲಿ ಸದಸ್ಯರುಗಳು, ನಿರ್ದೇಶಕರು, ಸಿಬ್ಬಂದಿಗಳು ಎಲ್ಲರೂ ಒಟ್ಟಾಗಿ ಶ್ರಮಿಸೋಣ ಎಂದು ಆಶಯವನ್ನು ವ್ಯಕ್ತಪಡಿಸಿದ್ದಾರೆ.

**ಮುನ್ನೋಟ 2025**

1) ಒಟ್ಟು ವ್ಯವಹಾರ (ಠೇವಣಿ ಮತ್ತು ಸಾಲ ಸೇರಿ) ಪ್ರಸ್ತುತ ರೂ.431 ಕೋಟಿಯಷ್ಟಿದ್ದು ಇದನ್ನು 31.03.2025ಕ್ಕೆ ರೂ.600 ಕೋಟಿಯಷ್ಟು ಹೆಚ್ಚಿಸಿಕೊಂಡು ರೂ.1,000 ಕೋಟಿಯನ್ನು ಮೀರಿದ ವ್ಯವಹಾರವನ್ನು ಸಾಧಿಸುವುದು.
2) 31.03.2025ಕ್ಕೆ ರೂ.10ಕೋಟಿ ನಿವ್ವಳ ಲಾಭವನ್ನು ಗಳಿಸುವುದು.
3) ಸದಸ್ಯರಿಗೆ ನಿರಂತರ ಪ್ರತಿ ವರ್ಷ ಶೇ.25 ಡಿವಿಡೆಂಡನ್ನು ನೀಡುವುದು.
4) ಸುಸ್ತಿ ಸಾಲವನ್ನು ಹೊರಬಾಕಿ ಸಾಲದ ಶೇ.0.10ಕ್ಕೆ ಸೀಮಿತದಲ್ಲಿಡುವುದು.
5) ಸಂಘದ ಸ್ವಂತ ನಿವೇಶನದಲ್ಲಿ ಕೇಂದ್ರ ಕಛೇರಿಗೆ ಆಧುನಿಕ ಸೌಕರ್ಯಗಳೊಂದಿಗೆ ಸುಸಜ್ಜಿತ ನೂತನ ಕಟ್ಟಡದ ನಿರ್ಮಾಣ ಕಾರ್ಯ ಮುಂದಿನ ಮೂರು ವರ್ಷಗಳ ಅವಧಿಯೊಳಗೆ ಪೂರ್ತೀಕರಿಸುವುದು ಹಾಗೂ ತದನಂತರ ಶಾಖೆಗಳಿಗೆ ಕೂಡ ಸ್ವಂತ ಕಛೇರಿಗಳನ್ನು ಹೊಂದುವುದು.
6) ಸಂಘವು ಮುಂದಿನ 5 ವರ್ಷಗಳಲ್ಲಿ ಕನಿಷ್ಠ 10 ಹೊಸ ಶಾಖೆಗಳು ಆರಂಭಿಸಿ, ಒಟ್ಟು 30 ಶಾಖೆಗಳನ್ನು ಹೊಂದುವುದು.
7) ಮಹಾಪ್ರಬಂಧಕರು ಮತ್ತು ಇತರ ಉನ್ನತ ಹುದ್ದೆಗಳಿಗೆ ನೇಮಕಾತಿ ಸಹಿತ ಸಂಘದ ವ್ಯವಹಾರಾಭಿವೃದ್ಧಿ ಮತ್ತು ಶಾಖಾ ವಿಸ್ತರಣೆಗನುಸಾರ ಹೊಸ ಸಿಬ್ಬಂದಿಗಳನ್ನು ನೇಮಕಾತಿ ಮಾಡಿಕೊಂಡು ಸಂಘದ ಸಿಬ್ಬಂದಿ ಬಲವನ್ನು ಪ್ರಸ್ತುತ 86ರಿಂದ ಕನಿಷ್ಠ 150ಕ್ಕೆ ವೃದ್ಧಿಸುವುದು ಹಾಗೂ ಆಂತರಿಕ ಆಡಳಿತಾತ್ಮಕ ಸುಧಾರಣೆಯನ್ನು ಮುಂದುವರಿಸುವುದು ಹಾಗೂ ಸಿಬ್ಬಂದಿ ಸೇವಾ ಸವಲತ್ತುಗಳನ್ನು ಇನ್ನಷ್ಟು ಉತ್ತಮಪಡಿಸುವುದು. ಸಿಬ್ಬಂದಿಗಳಲ್ಲಿ ವೃತ್ತಿಪರತೆ ಹೆಚ್ಚಿಸಿಕೊಳ್ಳಲು ತರಬೇತಿಗಳಿಗೆ ಆದ್ಯತೆ ನೀಡುವುದು.
8) ಕೇಂದ್ರ ಕಛೇರಿ ಸಹಿತ ಸಂಘದ ಶಾಖೆಗಳ ಹಳೆಯ ಪೀಠೋಪಕರಣವನ್ನು ನವೀಕರಿಸಿ, ಹವಾನಿಯಂತ್ರಣ ವ್ಯವಸ್ಥೆಯೊಂದಿಗೆ ಆಧುನೀಕರಿಸುವುದು.
9) ಸಂಘದ ಕಂಪ್ಯೂಟರೀಕೃತ ಕೆಲಸ ಕಾರ್ಯಗಳನ್ನು ಹೊಸ ತಂತ್ರಜ್ಞಾನಗಳ ಬಳಕೆಯೊಂದಿಗೆ ಇನ್ನಷ್ಟು ಉನ್ನತೀಕರಿಸುವುದು, ಅದರೊಂದಿಗೆ ಸದಸ್ಯ ಗ್ರಾಹಕರಿಗೆ ಕೊಡಲಾಗುವ ಸೇವೆಯನ್ನು ಇನ್ನಷ್ಟು ಉತ್ತಮಪಡಿಸುವುದು.
10) ವ್ಯವಹಾರಾಭಿವೃದ್ಧಿಗೆ ಪೂರಕವಾಗಿ, ಸಂಘದ ಉಪನಿಯಮ, ಸಿಬ್ಬಂದಿ ಸೇವಾ ಉಪನಿಯಮ, ವ್ಯವಹಾರ ನಿಯಮಾವಳಿಗಳಿಗೆ ಅಗತ್ಯ ತಿದ್ದುಪಡಿಗಳನ್ನು ತರುವುದು.
11) ಸಂಘವನ್ನು ಪಟ್ಟಣ ಸಹಕಾರಿ ಬ್ಯಾಂಕಾಗಿ (urban ಬ್ಯಾಂಕಾಗಿ) ಪರಿವರ್ತಿಸಲು ಪ್ರಯತ್ನಿಸುವುದು.

ಸಂಘದ ಸರ್ವ ಸದಸ್ಯರು, ಸಂಘದ ಆಡಳಿತ ಮಂಡಳಿ ಸದಸ್ಯರು, ಶಾಖಾ ಸಲಹಾ ಸಮಿತಿ ಅಧ್ಯಕ್ಷರು ಹಾಗೂ ಸದಸ್ಯರು ಮತ್ತು ಸಿಬ್ಬಂದಿ ವರ್ಗದವರ ಸಹಕಾರದಿಂದ 31.03.2025ಕ್ಕೆ ಈ ಮೇಲಿನ ಗುರಿಗಳನ್ನು ತಲುಪಿ ಕಾರ್ಯಯೋಜನೆಯನ್ನು ಖಂಡಿತವಾಗಿಯೂ ಸಾಧಿಸುವ ಭರವಸೆ ಈ ಮೂಲಕ ನಾನು ವ್ಯಕ್ತಪಡಿಸುತ್ತಿದ್ದೇನೆ.

**ಶ್ರೀ ಕೆ. ಜೈರಾಜ್ ಬಿ. ರೈ, ಅಧ್ಯಕ್ಷರು**

## ಮುಲ್ಕಿ ಶಾಖೆಯ ಹವಾನಿಯಂತ್ರಿತ ನವೀಕೃತ ಕಛೇರಿಯ ಉದ್ಘಾಟನೆ





ಮುಲ್ಕಿ ಶಾಖೆಯ ಹವಾನಿಯಂತ್ರಿತ ನವೀಕೃತ ಕಛೇರಿಯು, 05.03.2020ರ ಗುರುವಾರದಂದು ಬಪ್ಪನಾಡು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಆಡಳಿತ ಮುಕ್ತೇಸರರಾದ ಶ್ರೀ ಎನ್.ಎಸ್. ಮನೋಹರ್ ಶೆಟ್ಟಿಯವರು ಉದ್ಘಾಟಿಸಿದರು. ಮುಖ್ಯ ಅತಿಥಿಯಾದ ಮುಲ್ಕಿ ನಗರ ಪಂಚಾಯತ್ ನಿಕಟಪೂರ್ವಅಧ್ಯಕ್ಷರಾದ ಶ್ರೀ ಬಿ.ಸುನಿಲ್ ಆಳ್ವರವರು ಹವಾನಿಯಂತ್ರಿತ ವ್ಯವಸ್ಥೆಯನ್ನು ಉದ್ಘಾಟಿಸಿದರು.

## ಭಾವಪೂರ್ಣ ಶ್ರದ್ಧಾಂಜಲಿ



**ದಿ| ಬಿ. ಸಚ್ಚಿದಾನಂದ ಶೆಟ್ಟಿ**

ನಿಧನ : 28.03.2020

ಸಂಘದ ಸ್ಥಾಪಕ ನಿರ್ದೇಶಕರಾಗಿದ್ದು, ಸಂಘದ ಸ್ಥಾಪನೆಗೆ ಸಹಕರಿಸಿ, ಸಂಘದ ಪ್ರಗತಿಗೆ ತನ್ನದೇ ಆದ ಕೊಡುಗೆಯನ್ನು ನೀಡಿ, ನಮ್ಮನ್ನು ಅಗಲಿದ ಅವರ ದಿವ್ಯಾತ್ಮಕ್ಕೆ ಚಿರಶಾಂತಿಯನ್ನು ಕೋರುತ್ತಾ ಸಂಘದ ವತಿಯಿಂದ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸುತ್ತೇವೆ.

## ಹುಟ್ಟು ಹಬ್ಬದ ಶುಭಾಶಯಗಳು

**ಸಿಬ್ಬಂದಿಗಳ ಹೆಸರು ಮತ್ತು ಶಾಖೆ**

| | |
|---|---|
| ಕು. ಅಶ್ವಿತಾ ಎಂ., ಕೇಂದ್ರ ಕಛೇರಿ | ಶ್ರೀ ಕರುಣಾಕರ್ ಶೆಟ್ಟಿ, ಪುತ್ತೂರು |
| ಶ್ರೀಮತಿ ನಿರ್ಮಲ ಶೆಟ್ಟಿ, ಮೂಡಬಿದ್ರಿ | ಶ್ರೀಮತಿ ಲಾವಣ್ಯ, ಕುಂದಾಪುರ |
| ಶ್ರೀಮತಿ ತುಳಸಿ, ಮಂಗಳೂರು | ಶ್ರೀ ಗಣೇಶ್ ಜಿ.ಕೆ., ಕೇಂದ್ರ ಕಛೇರಿ |
| ಶ್ರೀಮತಿ ಅಕ್ಷತ ಕುಮಾರಿ, ಹಂಪನಕಟ್ಟೆ | ಶ್ರೀಮತಿ ಶ್ರೀಲತಾ ಶೆಟ್ಟಿ, ಬೈಂದೂರು |
| ಕು. ಶ್ರುತಿ ಕೆ., ಬಿ.ಸಿ.ರೋಡ್ | ಶ್ರೀ ಸೇಸಪ್ಪ ನ್ಯಾಕ್, ಸುಳ್ಯ |
| ಶ್ರೀ ಸೂರಜ್ ಭಂಡಾರಿ, ಸುರತ್ಕಲ್ | ಶ್ರೀ ಕುಂಞ, ಬಿ.ಸಿ.ರೋಡ್ |
| ಶ್ರೀ ಬಾಲಕೃಷ್ಣ ರೈ, ವಿಟ್ಲ | ಶ್ರೀ ಮಹಾಬಲ ಶೆಟ್ಟಿ, ಬಿ.ಸಿ.ರೋಡ್ |
| ಶ್ರೀ ಶಮಿತ್ ಕುಮಾರ್, ಮಂಗಳೂರು | ಶ್ರೀ ರಮೇಶ್ ಪಿ, ಸುಳ್ಯ |
| ಶ್ರೀ ಮೋಹನ್‌ದಾಸ್ ಶೆಟ್ಟಿ, ಕೇಂದ್ರ ಕಛೇರಿ | ಶ್ರೀಮತಿ ಉಷಾ ಬಿ., ಉಪ್ಪಿನಂಗಡಿ |
| ಶ್ರೀಮತಿ ಜ್ಯೋತಿ, ಕೇಂದ್ರ ಕಛೇರಿ | ಶ್ರೀ ನವೀನ್‌ಕುಮಾರ್, ಮೂಡಬಿದ್ರಿ |
| ಶ್ರೀ ಶ್ರೀಹರ್ಷ ಡಿಎಸ್., ಉಪ್ಪಿನಂಗಡಿ | ಶ್ರೀ ನಾಗರಾಜ್ ಎಚ್., ಬೈಂದೂರು |
| ಶ್ರೀ ಅಮರ್‌ನಾಥ್ ಹೆಗ್ಡೆ, ಬ್ರಹ್ಮಾವರ | ಶ್ರೀಮತಿ ಉಷಾ ಶೆಟ್ಟಿ, ಕೇಂದ್ರ ಕಛೇರಿ |
| ಶ್ರೀಮತಿ ಮಿಸ್ರಿಯ ಪಿ.ಐ., ಉಪ್ಪಿನಂಗಡಿ | ಶ್ರೀ ಮೋಹನ್‌ದಾಸ್ ಶೆಟ್ಟಿ, ಮಂಗಳೂರು |
| ಶ್ರೀಮತಿ ಜಯಂತಿ ಖಾರ್ವಿ, ಬೈಂದೂರು | ಶ್ರೀ ನಾಗರಾಜ್, ಕುಂದಾಪುರ |
| ಶ್ರೀ ಭರತ್ ಎಸ್., ಕಾರ್ಕಳ | ಶ್ರೀ ಹರೀಶ್ ಮೂಲ್ಯ, ಬಿ.ಸಿ.ರೋಡ್ |
| ಶ್ರೀಮತಿ ಅನಿತಾ ಎ., ಮುಲ್ಕಿ | ಶ್ರೀ ರಾಘವೇಂದ್ರ ರಾವ್, ಹೆಬ್ರಿ |